	ತಾಲ್ಲೂಕು	ಸನ್ನದುದಾರರ ವಿವರ	ಸನ್ನದಿನ ವಿವರ	ವರ್ಷ
1	2	3	4	5
1)	ಬಿಜಾಪುರ	ಶ್ರೀ ಸಂದೇಶಪರಪ್ಪ ಪಾಟೀಲ ನಂ.4 ಬಿಜಾಪುರ	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ
2)	--"--	ಶ್ರೀ ಮಡಿವಾಳಪ್ಪ ಮರಿಯಪ್ಪ 4ನೇ ವಾರ್ಡ್ ನಂ. 3 ಸಿಬಿಎಸ್ ನಂ.1604 1606, 1607, 1608 ಬಿಜಾಪುರ.	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ
3)	--"--	ಶ್ರೀ ಅಶೋಕ ಬಸಪ್ಪ ಹರಿಜನ ಗಂಗೋಳ್ಳಿ ರಾಮಣ್ಣ ಕಾಲೋನಿ ವಾರ್ಡ್ ನಂ. 7 ಸಿಬಿಎಸ್ ನಂ.890 891, ಪ್ಲಾಟ್ ನಂ.105, ಬಿಜಾಪುರ.	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ
4)	--"--	ಶ್ರೀ ಶ್ಯಾಮಕೊರಗು ಪೂಜಾರಿ ಹೋಟೇಲ್ ಮಧುವನ್ ಇಂಟರ್ ನ್ಯಾಷನಲ್, ಸ್ಟೇಷನ್ ರಸ್ತೆ ಬಿಜಾಪುರ.	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ

ಯಾವುದೇ ಸಿಎಲ್-2 ಸನ್ನದು ಮಂಜೂರು ಮಾಡಿರುವುದಿಲ್ಲ.

ಬಿಜಾಪುರ ತಾಲ್ಲೂಕಿನಲ್ಲಿ ಹಸಿರು ಕಾರ್ಡ್ ವಿತರಣೆ.

1631(2375) ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಿಜಾಪುರ ತಾಲ್ಲೂಕಿನಲ್ಲಿ ವಿತರಿಸಲಾದ ಹಸಿರು ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು ;

2) ಬಿಜಾಪುರ ನಗರದಲ್ಲಿರುವ ಪಡಿತರ ವಿತರಿಸುವ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು; ಇನ್ನು ತೆರೆಯಲು ಉದ್ದೇಶಿಸಿರುವ ಅಂಗಡಿಗಳ ಸಂಖ್ಯೆ ಎಷ್ಟು?

ಶ್ರೀ ಜೆ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ದಿನಾಂಕ: 1-6-99 ರವರೆಗೆ ಬಿಜಾಪುರ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ 55,720 ಹಾಗೂ ಪಟ್ಟಣ ಪ್ರದೇಶದಲ್ಲಿ 5,416 ಒಟ್ಟು 61,136 ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

2) 59
02

ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಅನುದಾನ.

1632(2377) ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ವಿಜಾಪುರ) :— ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನೀಡಲಾಗಿರುವ ಅನುದಾನ ಎಷ್ಟು? (ವಿಧಾನಸಭಾವಾರು ವಿವರ ನೀಡುವುದು)

ಆ) ವಿಜಾಪುರ ಜಿಲ್ಲಾ ವಿಧಾನಸಭೆ ಕ್ಷೇತ್ರಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಾವುವು (ವಿವರ ನೀಡುವುದು)

ಇ) ಪ್ರಸಕ್ತವರ್ಷ ಬಿಜಾಪುರ ಜಿಲ್ಲೆಯಲ್ಲಿ ಯೋಜನೆಯಲ್ಲಿ ಕೈಗೊಂಡ ಯೋಜನೆಗಳಾವುವು ಆ ಬಗ್ಗೆ ಕಾಯ್ದಿರಿಸಲಾದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :—

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ 1996-97 ರಿಂದ 1998-99ರವರೆಗೆ ವಿಧಾನಸಭಾ ಕ್ಷೇತ್ರವಾರು ವಿವಿಧ ಅನುಷ್ಠಾನಧಿಕಾರಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬಿಜಾಪುರ ಜಿಲ್ಲೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಇ) 1999-2000ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಮಂಡಳಿಯು ಕ್ರಿಯಾ ಯೋಜನೆಯನ್ನು ತಯಾರಿಸುತ್ತಿದೆ.